**ದಿನಾಂಕಃ 10.02.2025  ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು  –  ವಾದಿ ಪರ ವಕೀಲರಾದ ಶ್ರೀ ಡಿ ಎಸ್ ಬಿ ರಿಂದ**

ನನ್ನ ತಂದೆ ಮಾರ್ಚ್ 2016 ರಲ್ಲಿ ಮೃತಪಟ್ಟಿರುತ್ತಾರೆ. ಅವರು ಮೃತಪಡುವಾಗ ಅವರಿಗೆ 80 ವರ್ಷವಾಗಿತ್ತು. ನನ್ನ ತಂದೆ 1952 ರಿಂದ ರೇಷ್ಮೆ ಚರಕ ಕೆಲಸ ಮಾಡುತ್ತಿದ್ದರು. ನನ್ನ ದೊಡ್ಡಣ್ಣ ಹುಟ್ಟಿದಾಗ ನನ್ನ ತಂದೆಯವರು ಬೇರೆಯಾಗಿ ರೇಷ್ಮೆ ಚರಕ ಕೆಲಸ ಮಾಡುತ್ತಿದ್ದರು ಆ ಬಗ್ಗೆ ಬರವಣಿಗೆ ಇದೆ. ಪರವಾನಗಿ ನನ್ನ ತಂದೆಯ ಹೆಸರಿನಲ್ಲಿರುತ್ತದೆ. ನನ್ನ ಅಣ್ಣ 1956 ಅಥವಾ 1957 ರಲ್ಲಿ ಹುಟ್ಟಿರಬಹುದು. ನನ್ನ ಅಣ್ಣ ಹುಟ್ಟಿದ ನಂತರ ರೇಷ್ಮೆ ಚರಕ ವ್ಯಾಪಾರ ಮಾಡಲು ಪರವಾನಗಿ ಪಡೆದುಕೊಂಡಿದ್ದಾರೆ. ನಾನು 1970 ರಲ್ಲಿ ಹುಟ್ಟಿರುತ್ತೇನೆ. ನಾನು ನನ್ನ ತಂದೆಗೆ 8ನೇ ಮಗನಾಗಿರುತ್ತೇನೆ. ನನ್ನ ತಂದೆ ನಾನು ಹುಟ್ಟಿದ ನಂತರ ನನ್ನ ತಂದೆಯವರು 18 ಎಕರೆ ಜಮೀನು ಖರೀದಿ ಮಾಡಿರುತ್ತಾರೆ ಸರ್ವೆ ನಂಬರು ಹೇಳಲು ಬರುವುದಿಲ್ಲ. ನಾನು ಹುಟ್ಟುವುದಕ್ಕಿಂತ ಪೂರ್ವದಲ್ಲಿ ನನ್ನ ತಂದೆಗೆ ಏಳೆಂಟು ಎಕರೆ ಜಮೀನು ಇತ್ತು. ಒಟ್ಟು ನಮ್ಮ ತಂದೆಗೆ 27 ಎಕರೆ ಭೂಮಿ ಇದೆ. ಅದರಲ್ಲಿ 14.06 ಸೆಂಟ್, 1.58 ಸೆಂಟ್, 1.34 ಸೆಂಟ್ ಇಷ್ಟನ್ನು ನಾವು ದಾವಾದಲ್ಲಿ ತಂದಿದ್ದು ಉಳಿದಿದ್ದನ್ನು ವಿಭಾಗ ಮಾಡಿಕೊಂಡು ವ್ಯವಸಾಯ ಮಾಡುತ್ತಿದ್ದೇವೆಂದು ಉತ್ತರಿಸುತ್ತಾರೆ. ಸಾಕ್ಷಿಯು ತಂದೆ ಇದ್ದಾಗಲೇ ವಿಭಾಗ ಮಾಡಿಕೊಟ್ಟಿದ್ದರು ಎಂದು ಉತ್ತರಿಸುತ್ತಾರೆ. 2012 ರಲ್ಲಿ ನನ್ನ ತಂದೆ ವಿಭಾಗ ಮಾಡಿಕೊಟ್ಟಿರುತ್ತಾರೆ. ಸದರಿ ವಿಭಾಗದಲ್ಲಿ ನನಗೆ 1.35 ಸೆಂಟ್, ನನ್ನ ಅಣ್ಣ ಸುಂದರರಾಜುವಿಗೆ 2.50 ಸೆಂಟ್, ನನ್ನ ದೊಡ್ಡಣ್ಣ ಜಯರಾಜುವಿಗೆ ಎರಡೂವರೆ ಎಕರೆ ಕೊಟ್ಟಿರುತ್ತಾರೆ. ಅವುಗಳ ಸರ್ವೆ ನಂಬರು ನನಗೆ ಗೊತ್ತಿರುವುದಿಲ್ಲ. ಉಳಿಕೆ ಭೂಮಿ ನನ್ನ ತಾಯಿ ಹೆಸರಿನಲ್ಲಿದೆ. ಅದು 1.77 ಸೆಂಟ್ ಇರುತ್ತದೆ. ಉಳಿದ 14 ಎಕರೆ ನನ್ನ ಅಕ್ಕನಿಗೆ ಕುಟುಂಬದ ಜವಾಬ್ದಾರಿ ಹೊತ್ತುಕೊಂಡಿರುವ ಕಾರಣ ಕೊಟ್ಟಿರುತ್ತಾರೆ. ಉಳಿಕೆ ಭೂಮಿಯನ್ನು ನಾವೇ ಉಳುಮೆ ಮಾಡುತ್ತಿದ್ದೇವೆ.

ನಾನು ಒಟ್ಟು 5 ಎಕರೆಯಲ್ಲಿ ವ್ಯವಸಾಯ ಮಾಡುತ್ತಿದ್ದೇನೆ. ನನ್ನ ತಂದೆಗೆ 27 ಎಕರೆ ಜಮೀನಿದ್ದು ಅದು ಎಲ್ಲಾ ಆಸ್ತಿಗಳ ಮೇಲೆ ಈ ದಾವಾ ತಂದಿಲ್ಲವೆಂದು  ನನ್ನ ಪ್ರತಿವಾದ ಪತ್ರದಲ್ಲಿ ತಿಳಿಸಿಲ್ಲ. ನನ್ನ ತಂದೆಗೆ 27 ಎಕರೆ ಇತ್ತು ಅದನ್ನು ಮೇಲೆ ಹೇಳಿದಂತೆ ನಾವು ಭಾಗ ಮಾಡಿಕೊಂಡಿದ್ದೇವೆಂದು ಪ್ರತಿವಾದ ಪತ್ರದಲ್ಲಿ ಹೇಳಿರುವುದಿಲ್ಲ. 2012 ರಲ್ಲಿ ವಿಭಾಗ ಮಾಡಿಕೊಂಡಿದ್ದರ ಬಗ್ಗೆ ವಿಭಾಗ ಪತ್ರವಾಗಿರುತ್ತದೆ. ವಿಭಾಗ ಪತ್ರದಲ್ಲಿ ಮನೆಯ ಬಗ್ಗೆ ಮಾತ್ರ ನಮೂದು ಮಾಡಿರುತ್ತೇವೆ. ಸದರಿ ವಿಭಾಗ ಪತ್ರ ನೋಂದಣಿಯಾಗಿರುವುದಿಲ್ಲ. 2012 ರಲ್ಲಿ ನನ್ನ ತಂದೆಗೆ 72 ವರ್ಷವಾಗಿತ್ತು. ನನ್ನ ತಂದೆ ಆರೋಗ್ಯವಾಗಿದ್ದರು. ಅವರಿಗೆ 2000 ರಲ್ಲಿ ಹೃದಯಘಾತವಾಗಿತ್ತು ಆ ಸಮಯದಲ್ಲಿ ನನ್ನ ಅಕ್ಕನೇ ಕುಟುಂಬದ ವ್ಯವಹಾರ ನೋಡಿಕೊಳ್ಳುತ್ತಿದ್ದರು. ನನ್ನ ತಂದೆಯನ್ನು ನಾನು 10 – 12 ವರ್ಷ ನೋಡಿಕೊಂಡಿದ್ದು ಆ ಬಗ್ಗೆ ಎಷ್ಟು ಖರ್ಚಾಗಿತ್ತೆಂದು ಲೆಕ್ಕಪುಸ್ತಕ ಇಟ್ಟಿರುವುದಿಲ್ಲ. ನನ್ನ ತಂದೆ ತೀರಿಕೊಳ್ಳುವ ಮೂರು ವರ್ಷದ ಹಿಂದೆ ನನ್ನ ಅಕ್ಕ ಕರೆದುಕೊಂಡು ಹೋಗಿದ್ದರು ಎಂದರೆ ಸಾಕ್ಷಿಯು ನನ್ನ ತಂದೆಗೆ ಕ್ಯಾನ್ಸರ್ ಆಗಿದ್ದ ಕಾರಣ ಚಿಕಿತ್ಸೆಗೆಂದು ಕರೆದುಕೊಂಡು ಹೋಗಿರುತ್ತಾರೆಂದು ಉತ್ತರಿಸುತ್ತಾರೆ. 2014 ರಲ್ಲಿ ನನ್ನ ತಂದೆ ನಿಶ್ಯಕ್ತಿಯಾಗಿದ್ದರು ಆದರೆ ಓಡಾಡಿಕೊಂಡಿದ್ದರು ಎಂದು ಉತ್ತರಿಸುತ್ತಾರೆ. ಆ ಸಮಯದಲ್ಲಿ ನನ್ನ ತಂದೆ ವ್ಯವಹಾರ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ.  ನನ್ನ ತಂದೆ ತೀರಿಕೊಳ್ಳುವ ಎರಡು ಮೂರು ವರ್ಷದ ಹಿಂದೆ ಅನಾರೋಗ್ಯವಾಗಿದ್ದರು ಎಂದರೆ ಸರಿ. ನನ್ನ ತಂದೆ ಹಾಸಿಗೆ ಹಿಡಿದಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಗೆ ಆರೋಗ್ಯ ತೊಂದರೆ ಇದ್ದ ಕಾರಣ ವೈದ್ಯರ

ಹೇಳಿಕೆಯಂತೆ ಎಲ್ಲೂ ತಿರುಗಾಡುವಂತಿರಲಿಲ್ಲ ಎಂದರೆ ಸಾಕ್ಷಿಯು ಅವರು ತಿರುಗಾಡುತ್ತಿದ್ದರು ಎಂದು ಉತ್ತರಿಸುತ್ತಾರೆ. ನನ್ನ ತಂದೆಗೆ ತೀವ್ರತರವಾದ ಅನಾರೋಗ್ಯದಿಂದ ನಿರಂತರವಾಗಿ ಚಿಕಿತ್ಸೆಗೆ ಮೂರು ವರ್ಷ ಹೋಗುತ್ತಿದ್ದರು ಎಂದರೆ ಸರಿ. ಆ ಅವಧಿ ಅಂದರೆ ಮೂರು ವರ್ಷಗಳಲ್ಲಿ ನನ್ನ ತಂದೆ ಯಾವುದೇ ದಾಖಲೆ ಬರೆದಿರುವುದಿಲ್ಲ. ನಾನು ಹಾಜರು ಪಡಿಸಿದ ವಿಲ್ ನಾಮೆ ಮತ್ತು ದಾನಪತ್ರ ಅವರ ಅನಾರೋಗ್ಯ ಸಮಯದಲ್ಲಿ ಆಗಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಅವರು ತೋಟಕ್ಕೆ ಹೋಗುತ್ತಿದ್ದರು ಮತ್ತು ನನ್ನ ವ್ಯವಹಾರದಲ್ಲೂ ಕೈಜೋಡಿಸುತ್ತಿದ್ದರು ಎಂದು ಉತ್ತರಿಸುತ್ತಾರೆ.

ನನ್ನ ತಂದೆ ತೀರಿಕೊಳ್ಳುವ ಪೂರ್ವದಲ್ಲಿ ಎಷ್ಟು ವರ್ಷದವರೆಗೆ ರೇಷ್ಮೆ ವ್ಯವಹಾರ ಮಾಡಿದರು ಎಂದರೆ ಸಾಕ್ಷಿಯು 2001 ರಿಂದ 2008 ರವರೆಗೆ ನನ್ನ ದೊಡ್ಡಣ್ಣ ವ್ಯವಹಾರ ಮಾಡಿರುತ್ತಾರೆ. 2008 ರಿಂದ ನನ್ನ ಎರಡನೇ ಅಣ್ಣ ವ್ಯವಹಾರ ಮಾಡಿರುತ್ತಾರೆ. 2014 ರಿಂದ ನಾನು ವ್ಯವಹಾರ ಮಾಡಿರುತ್ತೇನೆ. ರೇಷ್ಮೆ ವ್ಯವಹಾರಕ್ಕೆ ಎಷ್ಟು ಬಂಡವಾಳ ಹಾಕುತ್ತಿದ್ದೆವು ಮತ್ತು ಎಷ್ಟು ಖರ್ಚು ಆಗುತ್ತಿತ್ತು ಮತ್ತು ಅದರಿಂದ ಬಂದ ಲಾಭದ ಬಗ್ಗೆ ಲೆಕ್ಕ ಪುಸ್ತಕ ಇಟ್ಟಿರುವುದಿಲ್ಲ. ನನ್ನ ದೊಡ್ಡಣ್ಣ ರೇಷ್ಮೆ ವ್ಯವಹಾರ ಮಾಡುತ್ತಿದ್ದಾಗ ಆದಾಯ ಮೂರು ಸಾವಿರ ಬರುತ್ತಿತ್ತು. ಅದು ನಮ್ಮ ಕುಟುಂಬಕ್ಕೆ ಸಾಲುತ್ತಿರಲಿಲ್ಲ. ನನ್ನ ತಂದೆ ರೇಷ್ಮೆ ವ್ಯವಹಾರ ಮಾಡುತ್ತಿದ್ದಾಗಲೂ ಇದೇ ಪರಿಸ್ಥಿತಿಯಾಗುತ್ತಿತ್ತು. ನಾನು ರೇಷ್ಮೆ ವ್ಯವಹಾರ ಮಾಡಲು ಶುರುಮಾಡಿದ ನಂತರ ಲಾಭಾಂಶ ಬರುತ್ತಿತ್ತು. ನನ್ನ ಎರಡನೇ ಅಣ್ಣ ರೇಷ್ಮೆ ವ್ಯವಹಾರ ಮಾಡುತ್ತಿದ್ದಾಗ ನಷ್ಟವಾಗುತ್ತಿತ್ತು. ಏನೂ ಲಾಭಾಂಶ ಬರದ ಕಾರಣ ಬಂಡವಾಳ ಹಾಕುವುದು ಕಷ್ಟವಾಗುತ್ತಿತ್ತು ಎಂದರೆ ಸಾಕ್ಷಿಯು ನನ್ನ ಅಕ್ಕ ಬಂಡವಾಳ ಹಾಕಲು ಸಹಾಯ ಮಾಡುತ್ತಿದ್ದರು ಎಂದು ಉತ್ತರಿಸುತ್ತಾರೆ. ನನ್ನ ತಂದೆ ಅಕ್ಕನಿಂದ ಬಂಡವಾಳಕ್ಕೆ ಸಹಾಯ ಪಡೆಯುತ್ತಿದ್ದ ಬಗ್ಗೆ ನನ್ನ ಪ್ರತಿವಾದ ಪತ್ರದಲ್ಲಿ ಹೇಳಿರುವುದಿಲ್ಲ. ನನ್ನ ಪ್ರತಿವಾದ ಪತ್ರದಲ್ಲಿ ನನ್ನ ತಂದೆ, ದೊಡ್ಡಣ್ಣ, ಎರಡನೇ ಅಣ್ಣ ರೇಷ್ಮೆ ವ್ಯವಹಾರ ಮಾಡುತ್ತಿದ್ದಾಗ ಲಾಭ ಬರುತ್ತಿರಲಿಲ್ಲ ನಷ್ಟವಾಗುತ್ತಿತ್ತು ಎನ್ನುವ ವಿಚಾರ ಹೇಳಿರುವುದಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ನನ್ನ ತಂದೆ ದಾನಪತ್ರ ಬರೆದುಕೊಟ್ಟಿದ್ದು ಉಳಿಕೆ ಆಸ್ತಿಯಲ್ಲಿ ಭಾಗ ಕೇಳಬಹುದು ಎಂದು ಬರೆದಿದ್ದು ಎಷ್ಟು ಉಳಿಕೆ ಆಸ್ತಿ ಇದೆ ಎಂದು ನಮೂದು ಮಾಡಿಲ್ಲ ಎಂದರೆ ಸರಿ. ನನ್ನ ತಂದೆ ದಾನ ಪತ್ರ ಮತ್ತು ವಿಲ್ ನಾಮೆ ಮಾಡುವಾಗ ಎಲ್ಲರನ್ನೂ ಕೂರಿಸಿ ಮಾಡಿರುತ್ತಾರೆ. ನನ್ನ ತಂದೆ ದಾನ ಮತ್ತು ವಿಲ್ಲನ್ನು ಮಾಡುವಾಗ ಎಲ್ಲರನ್ನೂ ಕೂರಿಸಿ ಯಾರು ಯಾರಿಗೆ ಏನೇನು ಕೊಡಬೇಕೆಂದು ಮಾತುಕತೆ ಮಾಡಿರುತ್ತಾರೆ. ಸದರಿ ದಾಖಲೆಗೆ ಸಂಬಂಧಪಟ್ಟಂತೆ ವಾದಿಯರಿಗೆ ವಿಚಾರ ಗೊತ್ತಿರುವುದಿಲ್ಲ. ಮಾತುಕತೆ ಮಾಡಿದ ದಿನಾಂಕ ತಿಂಗಳು ಇಸವಿ ನೆನಪಿರುವುದಿಲ್ಲ. .

**ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಪಾಟೀ ಸವಾಲು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.